

# ಸಂಜಯ್ ಹುಮ್ಮಸ್ಸು

ಸಂಜಯ್ ದತ್‌ಗೆ ವಯಸ್ಸಾಗಿದೆ ಎಂದು ಯಾರು ಹೇಳಿದ್ದು? ನವತರುಣರನ್ನೂ ನಾಚಿಸುವಂತೆ ಆತ ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದಾನೆ. ಈ ವಯಸ್ಸಿನಲ್ಲಿ ಆತ ನಿರ್ವಹಿಸಬಹುದಾದಂತಹ ಪಾತ್ರಗಳನ್ನು ನಿರ್ವಹಿಸಲು ಬೇರೆ ನಟರೂ ಸಿಕ್ಕುತ್ತಿಲ್ಲ ಎನ್ನುತ್ತಿದೆ ಬಾಲಿವುಡ್. ಜೈಲಿಗೆ ಹೋಗಿ ಬಂದ ಬಳಿಕದ ಆತನ ಎರಡನೇ ಇನಿಂಗ್ಸ್ ಭರ್ಜರಿಯಾಗಿಯೇ ಮುಂದುವರಿದಿದೆ. ಗೋವರಿಕರ್ ನಿರ್ದೇಶನದ ಚಾರಿತ್ರಿಕ ಚಿತ್ರ 'ಪಾಣಿಪತ್' ಡಿಸೆಂಬರ್‌ನಲ್ಲಿ ತೆರೆ ಕಾಣಲಿದೆ. ಅರ್ಜುನ್ ಕಪೂರ್ ಮತ್ತು ಕೃತಿ ನಾಯಕ–ನಾಯಕಿ ಆಗಿರುವ ಈ ಚಿತ್ರದಲ್ಲಿ ಸಂಜಯ್ ಸಖತ್ ಮಿಂಚಿದ್ದಾನೆಂದು ಸುದ್ದಿ ಇದೆ.

ಕನ್ನಡದ ಸೂಪರ್‌ಹಿಟ್ ಚಿತ್ರ 'ಕೆಜಿಎಫ್'ನ ಚಾಪ್ಟರ್2 ಕೂಡಾ ಡಿಸೆಂಬರ್‌ನಲ್ಲಿ ತೆರೆಗೆ ಬರಲಿದ್ದು, ಅದರಲ್ಲಿ ಸಂಜಯ್ ನಿರ್ವಹಿಸಿದ ಪಾತ್ರದ ಬಗ್ಗೆ ಚಿತ್ರತಂಡ ಫುಲ್ ಖುಷ್ ಆಗಿದೆಯಂತೆ. ಈ ಮಧ್ಯೆ ರಣಬೀರ್ ಕಪೂರ್ ನಾಯಕನಾಗಿರುವ 'ಶಂಸೇರಾ'ದಲ್ಲಿ ಮತ್ತು ನರ್ಗಿಸ್ ಫಖ್ರಿ ಜೊತೆಗಿನ 'ಟೋರ್‌ಬಾಜ್' ಚಿತ್ರದಲ್ಲಿ ಸಂಜಯ್ ಪ್ರಮುಖ ಪಾತ್ರದಲ್ಲಿದ್ದಾನೆ. ಇವೆರಡೂ ಚಿತ್ರಗಳು 2020ಕ್ಕೆ ತೆರೆಗೆ ಬರಲಿವೆ. 'ಮುನ್ನಾಭಾಯಿ3' ಸಂಜಯ್‌ನ ಯಶಸ್ವೀ ಚಿತ್ರಸರಣಿಯಲ್ಲಿ ಮೂರನೇ ಚಿತ್ರವಾಗಿದ್ದು ಅದು ಮುಂದಿನ ಏಪ್ರಿಲ್‌ನಲ್ಲೇ ತೆರೆಕಾಣಲಿದೆ. ಬೆನ್ನಲ್ಲೇ 'ದಿ ಗುಡ್ ಮಹಾರಾಜ' ಮತ್ತು 'ಸಡಕ್ 2' ಕೂಡಾ ಸಿದ್ಧವಾಗಲಿದೆ.

1981ರಲ್ಲಿ ಅಪ್ಪ ಸುನಿಲ್ ದತ್ ನಿರ್ದೇಶಿಸಿದ 'ರಾಕಿ' ಚಿತ್ರದ ಮೂಲಕ ಬೆಳ್ಳಿ ತೆರೆಗೆ ಕಾಲಿಟ್ಟ ಸಂಜಯ್ ದತ್, ಎರಡು ಫಿಲಂಫೇರ್ ಮತ್ತು ಮೂರು ಸ್ಕ್ರೀನ್ ಪ್ರಶಸ್ತಿಗಳನ್ನೂ ಗಳಿಸಿದ್ದು, ಆಕ್ಷನ್ ಮಾತ್ರವಲ್ಲ ಅಭಿನಯಕ್ಕೂ ಸೈ ಎನ್ನುತ್ತಿದ್ದಾನೆ. ಹಾಗೆಂದೇ ಸಾಲು ಸಾಲಾಗಿ ಚಿತ್ರಗಳು ಬರುತ್ತಿವೆ.

■ ಹನಿ

# ಕರೀನಾ ಕಪೂರ್ ಎಲ್ಲಿ?



ಕರೀನಾ ಕಪೂರ್ ಕಾಲ ಮುಗಿಯಿತು ಎನ್ನುತ್ತಿದ್ದವರಿಗೆ ಉತ್ತರ ನೀಡುವಂತೆ ಆಕೆ ನಟಿಸಿದ 'ಗುಡ್ ನ್ಯೂಸ್' ಚಿತ್ರ ಡಿಸೆಂಬರ್ 27ರಂದು ತೆರೆ ಕಾಣಲಿದೆ.

ಈ ಚಿತ್ರದಲ್ಲಿ ಅಕ್ಷಯ್ ಕುಮಾರ್ ಹೀರೊ. ಈ ಅಕ್ಷಯ್ ಕುಮಾರ್ ಮುಟ್ಟಿದ್ದೆಲ್ಲ ಚಿನ್ನ ಎನ್ನುವುದು 2018ರಲ್ಲಿ ಮನೆಮಾತಾಗಿದ್ದ ಹೇಳಿಕೆ. 2019ರಲ್ಲಿ ಆತನ ಚಿತ್ರಗಳನ್ನು ನೋಡಿದರೆ ಆ ಯಶಸ್ಸು ಹಾಗೆಯೇ ಮುಂದುವರಿದಿದೆ. ಅಕ್ಷಯ್‌ನ ಯಶಸ್ಸಿನ ಈ ಓಟದಲ್ಲಿ ತನಗೂ ಪಾಲು ಸಿಗುವುದು ಖಚಿತ ಎನ್ನುವುದು ಕರೀನಾ ನಂಬಿಕೆಯಂತೆ. ■